CC No. 454/2022

PW-1

ದಿನಾಂಕಃ 26-05-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ. ಪಿ ಎಮ್ ಜಿ  ವಕೀಲರಿಂದ.</u>**

ಶಿವಮೂರ್ತೆಪ್ಪ ಅಕ್ಕಿ ನನ್ನ ತಂದೆ ಎಂದರೆ ಸರಿ. ಅವರ ಸಹೋದರರು ಫಕ್ಕೀರಪ್ಪ, ಬಸಪ್ಪ, ಮಲ್ಲಿಕಾರ್ಜುನ, ಚಂದ್ರಶೇಖರ ಮತ್ತು ಮಂಜುನಾಥ, ಶಾಂತಪ್ಪ ಎಂದರೆ ಸರಿ. ನನ್ನ ತಂದೆ ಮತ್ತು ಅವರ ಎಲ್ಲಾ ಸಹೋದರರು ವ್ಯಾಪಾರ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಕೆಲವರು ಮಾತ್ರ ವ್ಯಾಪಾರ ಮಾಡುವುದಾಗಿ ನುಡಿಯುತ್ತಾರೆ. ಮಲ್ಲಿಕಾರ್ಜುನ , ಮಂಜುನಾಥ ಇವರು ಮಾತ್ರ ವ್ಯಾಪಾರ ಮಾಡುತಿದ್ದರು. ಆ ಪೈಕಿ ಮಲ್ಲಿಕಾರ್ಜುನ ಈಗ ತೀರಿಕೊಂಡಿರುವುದಾಗಿ ಸಾಕ್ಷಿ ಸ್ವತಃ ನುಡಿಯುತ್ತಾರೆ. ಫಕ್ಕೀರಪ್ಪ ಇವರು ಸೈಕಲ್ ರಿಪೇರಿ ವ್ಯಾಪಾರ ಮಾಡುತ್ತಿದ್ದರು. ಬಸಪ್ಪ ಇವರು ಕಾಳು ಕಡಿ ಮಾರಾಟ ಮಾಡುವ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಚಂದ್ರಶೇಖರ ಇವರು ಸೀಮೆಎಣ್ಣೆ ಮಾರಾಟ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಶಾಂತಪ್ಪ ಇವರು ಕಿರಾಣಿ ಅಂಗಡಿ ವ್ಯಾಪಾರ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಆತನ ಸಹೋದರರು ತಮ್ಮ ಜೀವನ ನಿರ್ವಹಣೆಗಾಗಿ ಒಂದಿಲ್ಲ ಒಂದು ವ್ಯಾಪಾರ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ನನ್ನ ಚಿಕ್ಕಪ್ಪ ಮಂಜುನಾಥ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ಸಹೋದರರು ಶಂಭಣ್ಣ ಹಾಗೂ ದಯಾನಂದ ಮತ್ತು ನಾನು 3 ಜನ ವ್ಯಾಪಾರ ಮಾಡುತ್ತೇವೆ ಎಂದರೆ ಸರಿ. ಈ ಹಿಂದೆ ನಾನು ಪೈನಾನ್ಸ ಇಟ್ಟುಕೊಂಡು ಲೇವಾದೇವಿ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿ. ಈಗ ಮಾಡುತ್ತಿಲ್ಲ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ನಾನು ಗ್ರಾಹಕರಿಗೆ ಅತೀಯಾದ ಬಡ್ಡಿ ಆಕರಣೆ ಮಾಡಿ ಅವರಿಗೆ ತೊಂದರೆ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಹಾಗೇ ನನ್ನಿಂದ ನೊಂದ ಗ್ರಾಹಕರು ನನ್ನ ಮೇಲೆ ಪೊಲೀಸ ಠಾಣೆಯಲ್ಲಿ ದೂರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನಾನು ದಿನದ ಬಡ್ಡಿಯ ಆಧಾರದ ಮೇಲೆ ಸಾಲ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಈ ಕುರಿತು ನೊಂದ ವ್ಯಕ್ತಿಗಳು ನನ್ನ ವಿರುದ್ಧ ಸಾಕಷ್ಟು ದೂರು ಸಲ್ಲಿಸಿದ್ದರು ಎಂದರೆ ಸರಿಯಲ್ಲ.

2. ಆರೋಪಿ ನನಗೆ ಗೋವಿನ ಜೋಳ, ಇತರೇ ಧಾನ್ಯಗಳನ್ನು ಮಾರಾಟ ಮಾಡುತ್ತಿದ್ದರು ಆದ್ದರಿಂದ ಅವರ ಪರಿಚಯ ನನಗೆ ಇತ್ತು. ಆರೋಪಿ ತನ್ನ

ಕಾರ್ಯಕ್ಷೇತ್ರದಲ್ಲಿ ಹಾಗೇ ದವಸ ಧಾನ್ಯಗಳನ್ನು ರೈತರಿಂದ ಪಡೆದುಕೊಳ್ಳುವ ಕೆಲಸ ಮಾಡುತ್ತಿದ್ದರು. ಶಿಗ್ಗಾಂವ ಪರಿಸರದಲ್ಲಿ ಆರೋಪಿತರು ಹಾಗೇ ದವಸ ಧಾನ್ಯಗಳನ್ನು ಪಡೆದುಕೊಳ್ಳುತ್ತಿರಲಿಲ್ಲ ಎಂದರೆ ಸರಿ. ಅವರದು ಶಿಗ್ಗಾಂವದಲ್ಲಿ ಯಾವುದೇ ಏಜೆನ್ಸಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

3. ಆರೋಪಿ ನನ್ನಿಂದ ಕೈಗಡ ಹಣ ಪಡೆದುಕೊಂಡಿರುವುದಾಗಿ ಹೇಳಿದ್ದು ಈ ಕುರಿತು ಅವರಿಂದ ಲಿಖಿತ ಕಾಗದ ಪತ್ರ ಬರೆಯಿಸಿಕೊಂಡಿಲ್ಲ. ಹಾಗೇ ಹಣ ಪಡೆದುಕೊಳ್ಳುವಾಗ ಕೈಗಡ ಪತ್ರ, ಒಪ್ಪಂದ ಪತ್ರ ಇಲ್ಲವೇ ಸಣ್ಣ ಚೀಟಿ ಸಹ ಬರೆಯಿಸಿಕೊಂಡಿಲ್ಲ. ನಾನು ಆರೋಪಿತನಿಂದ ದವಸ ಧಾನ್ಯ ಪಡೆದುಕೊಂಡ ಬಗ್ಗೆ ಸರ್ಕಾರದ ಜಿಎಸ್‌ಟಿ , ಸಿಎಸ್‌ಟಿ ಪಡೆದುಕೊಂಡಿಲ್ಲ.

4. ಸಾಕ್ಷಿಗೆ ಈ ಪ್ರಕರಣದ ಕಡತದಿಂದ ಡಿಪಾಸಿಟ್ ಪೇ ಇನ್ ಸ್ಲಿಪ್ ತೋರಿಸಿ ಅದರ ಮೇಲೆ ಇರುವ ಸಹಿಯನ್ನು ಗುರುತಿಸುವಂತೆ ಕೇಳಿದ್ದು ಸಾಕ್ಷಿ ತಮ್ಮ ಸಹಿಯನ್ನು ಒಪ್ಪಿಕೊಳ್ಳುತ್ತಾರೆ. **ಸದರಿ ದಾಖಲೆಯನ್ನು ಸಾಕ್ಷ್ಯದಲ್ಲಿ ಗುರುತಿಸುವಿಕೆಯ ಸಲುವಾಗಿ ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಡಿ-1(ಎ) ಎಂದು ಗುರುತಿಸಲಾಯಿತು.** ನಿಡಿ-1 ರ ಮೇಲೆ ಇರುವ ಎಲ್ಲಾ ಬರವಣಿಗೆಗಳು ನನ್ನದೇ ಎಂದರೆ ಸರಿ. ನಿಪಿ-1 ಮತ್ತು ನಿಡಿ-1 ರ ಮೇಲೆ ಇರುವ ಬರವಣಿಗೆಗಳು ಒಂದೇ ಮತ್ತು ಒಬ್ಬನದೇ ಎಂದರೆ ಸರಿ. ಸದರಿ ಬರವಣಿಗೆಗಳನ್ನು ನಾನೇ ಬರೆದಿರುತ್ತೇನೆ ಎಂದರೆ ಸರಿ. ನಿಪಿ-1 ರ ಮೇಲೆ ಖಾತೆ ನಂಬರದಲ್ಲಿ ಯಾವುದೇ ಅಂಕಿಗಳು ಇಲ್ಲ ಎಂದರೆ ಸರಿ. ಖಾತೆ ಸಂಖ್ಯೆಯನ್ನು ರಬ್ಬರ್ ಸ್ಟ್ಯಾಂಪ್ ಮೂಲಕ ಹಾಕಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಬ್ಯಾಂಕಿನವರೇ ಹಾಗೇ ಸ್ಟ್ಯಾಂಪ್ ಮೂಲಕ ಖಾತೆ ಸಂಖ್ಯೆ ಹಾಕಿರುವುದಾಗಿ ಸ್ವತಃ ನುಡಿಯುತ್ತಾರೆ. ನಿಪಿ-1 ರ ಮೇಲೆ ಆರೋಪಿತನ ಹೆಸರು ಇರುವುದಿಲ್ಲ ಎಂದರೆ ಸರಿ. ಸಿಂಡಿಕೇಟ್ ಬ್ಯಾಂಕ್ ಇದು ದಿನಾಂಕ 01-04-2020 ರಿಂದ ಮುಚ್ಚಿ ಹೋಗಿರುತ್ತದೆ ಎಂದರೆ ಸರಿಯಲ್ಲ. ಸಿಂಡಿಕೇಟ್ ಬ್ಯಾಂಕ್ ಇದು ದಿನಾಂಕ 01-04-2020 ರಿಂದ ತನ್ನ ಹೆಸರು ಮತ್ತು ಸ್ಥಾನಮಾನ ಕಳೆದುಕೊಂಡಿರುತ್ತದೆ ಎಂದರೆ ಸರಿಯಲ್ಲ.

CC No. 454/2022
PW-1

5. ಆರೋಪಿ ನನಗೆ ದಿನಾಂಕ 17-06-2021 ರಲ್ಲಿ ಚೆಕ್ಕು ಕೊಟ್ಟಿರುತ್ತಾನೆ. ನನ್ನ ಪ್ರಕಾರ ಆರೋಪಿ ಮಾರ್ಚ 2021 ರಲ್ಲಿ ನನ್ನಿಂದ ಹಣ ಪಡೆದುಕೊಂಡಿದ್ದರು. ನಾನು ಆರೋಪಿಗೆ ಹಣ ನೀಡುವಾಗ ಇಲ್ಲವೇ ಆರೋಪಿ ನನಗೆ ಚೆಕ್ಕು ನೀಡಿರುವುದಾಗಿ ಹೇಳುವ ದಿನಾಂಕದಂದು ಸಿಂಡಿಕೇಟ್ ಬ್ಯಾಂಕ್ ತನ್ನ ಕಾರ್ಯ ನಿರ್ವಹಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಹಾಗೇ ಬ್ಯಾಂಕಿನವರು ತನ್ನ ಗ್ರಾಹಕರಿಗೆ ನೋಟೀಸು ನೀಡಿ ತಾನು ನೀಡಿದ ಚೆಕ್ಕನ್ನು ಮರಳಿ ಬ್ಯಾಂಕಿಗೆ ಸಂದಾಯ ಮಾಡುವಂತೆ ನೋಟೀಸು ಕೊಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿ ನನಗೆ ಚೆಕ್ಕು ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕು ಆರೋಪಿತನದು ಅಲ್ಲ ಎಂದರೆ ಸರಿಯಲ್ಲ. ನಾನು ನಿಪಿ-1 ನ್ನು ಕೆನರಾ ಬ್ಯಾಂಕ್ ಶಾಖೆ, ವಿದ್ಯಾನಗರ ಹುಬ್ಬಳ್ಳಿ ಇಲ್ಲಿಯ ನನ್ನ ಖಾತೆಯ ಮೂಲಕ ಬಟವಡೆಗೆ ಹಾಕಿರುವುದಾಗಿ ನನ್ನ ಸಾಕ್ಷ್ಯ ಮತ್ತು ದೂರು ಪ್ಯಾರಾ ನಂ.6 ರಲ್ಲಿ ಬರೆದುಕೊಂಡಿರುತ್ತೇನೆ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.